ಮೂ. ದಾ. ನಂ. 81/2017

ಪಿ.ಡಬ್ಲ್ಯು.4

(ಇಂದು ದಿನಾಂಕ 01-02-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಎನ್.ಎಸ್. ವಕೀಲರಿಂದಃ**

ನಿ.ಪಿ. 10 ಮೂಲ ನಕ್ಷೆಯ ಜೆರಾಕ್ಸ ಪ್ರತಿ ಎಂದರೆ ಸರಿ. ನಿ.ಪಿ. 10 ರ ಮೂಲ ಪ್ರತಿ ನಮ್ಮ ಸರ್ವೆ ಇಲಾಖೆಯ ಅಭಿಲೇಖಾಲಯ(ರೆಕಾರ್ಡ ರೂಂ) ದಲ್ಲಿ ಇರುತ್ತದೆ. ನಿ.ಪಿ. 10 ರ ಮೂಲ ನಕಾಶೆಯನ್ನು ಹಿಂದಿನ ದಿನಾಂಕದಂದು ಸಾಕ್ಷಿ ನುಡಿಯಲು ಬಂದಾಗ ನ್ಯಾಯಾಲಯಕ್ಕೆ ತಂದಿರುವುದಿಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯಕ್ಕೆ ಬರುವಾಗ ತಂದಿರುತ್ತೇನೆ ಎಂದು ನುಡಿದಿರುತ್ತಾರೆ. ನಿ.ಪಿ. 10 ನ್ನು ತಯಾರಿಸುವಾಗ ಯಾವ ದಾಖಲೆಗಳ ಆಧಾರದ ಮೇಲೆ ತಯಾರಿಸಿರುತ್ತೇವೆ ಎಂಬುದರ ಬಗ್ಗೆ ನಮ್ಮ ಮೂಲ ಕಡತದಲ್ಲಿ ಇರುತ್ತದೆ ಎಂದರೆ ಸರಿ. ನಿ.ಪಿ. 10 ಅಳತೆ ಮಾಡುವ ಕಾಲಕ್ಕೆ ಮೂಲ ದಾಖಲೆಯ ನಕಲನ್ನು ತೆಗೆದುಕೊಂಡು ಹೋಗಿರುತ್ತೇವೆ. ಸ.ನಂ. 638 ಅ ದಲ್ಲಿ ಪ್ರಾರಂಭದಲ್ಲಿ ಹಿಸ್ಸಾ 2 ಮತ್ತು 3 ಹಿಸ್ಸಾ ಇತ್ತು ಎಂದರೆ ಸರಿ. ಹಿಸ್ಸಾ 2 ಮತ್ತು 3 ರ ಮೂಲ ಹಿಸ್ಸಾ ನಕಾಶೆಯನ್ನು ಪಿ ಟಿ ಶೀಟ್ ಎನ್ನುತ್ತಾರೆ ಎಂದರೆ ಸರಿ. ಸ.ನಂ. 638 ಅ ಪೋಡಿಯಾದ ನಂತರ ಹಿಸ್ಸಾ 2 ಅ, 2 ಬ, 2 ಕ ಆಗಿರುತ್ತದೆ ಎಂದರೆ ಸರಿ. ಸ.ನಂ. 638 ಅ ಹಿಸ್ಸಾ 3 ಎಂದು ಇರುವುದು ಪೋಡಿಯಾದ ನಂತರ ಹಿಸ್ಸಾ 3ಅ, 3ಬ, 3ಕ, 3ಡ ಎಂದು ಹೊಸದಾಗಿ ಹಿಸ್ಸಾ ಆಗಿರುತ್ತದೆ ಎಂದರೆ ಸರಿ. ಹಿಸ್ಸಾ 3 ಡ ರಾಷ್ಟ್ರೀಯ ಹೆದ್ದಾರಿಗೆ ಭೂಸ್ವಾಧೀನ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಹಿಸ್ಸಾ 3 ಡ ಅನ್ನು ಅಳತೆ ಮಾಡಲು ಹೊಸದಾಗಿ ಹಿಸ್ಸಾ ಆದ 3ಅ, 3ಬ, 3ಕ, ನೇದರ ಹಾಗೂ ಹಿಸ್ಸಾ 2 ಅ, 2 ಬ , 2 ಕ ನೇದರ ಹೊಸದಾಗಿ ಪೋಡಿ ಆಗಿರುವ ನಕಾಶೆಯನ್ನು ತೆಗೆದುಕೊಂಡು ಅಳತೆ ಮಾಡಿರುತ್ತೇವೆ ಎಂದರೆ ಸರಿ. ಅಳತೆ ಮಾಡುವಾಗ ಸಂಬಂಧಪಟ್ಟ ಪಹಣಿ ಪತ್ರಿಕೆಯನ್ನು ತೆಗೆದುಕೊಂಡು ಹೋಗಿರುತ್ತೇವೆ ಎಂದರೆ ಸಾಕ್ಷಿಯು ಅಳತೆಗೆ ಅವಶ್ಯಕತೆ ಇರುವ ಪಹಣಿ ಪತ್ರಿಕೆಯನ್ನು ತೆಗೆದುಕೊಂಡು ಹೋಗಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ಭೂಮಾಪನ ಅಳತೆ ಕಾಲಕ್ಕೆ

ತೆಗೆದುಕೊಂಡು ಹೋದ ಹಿಸ್ಸಾ ನಕಾಶೆಯಲ್ಲಿ ಹಿಸ್ಸಾ ನಂ. 3ಡ ಹಿಸ್ಸಾ ಆಗಿದ್ದು ಕಾಣಿಸುತ್ತದೆ ಎಂದರೆ ಸರಿ. ಹಿಸ್ಸಾ 3 ಡ ಯಾರ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ. 10 ರಲ್ಲಿ ಹಿಸ್ಸಾ ನಂ. 3 ಡ ಕಾಣಿಸುವುದಿಲ್ಲ ಎಂದರೆ ಸರಿ. ನಿ.ಪಿ. 10 ನಕಾಶೆಯನ್ನು ತಯಾರಿಸುವಾಗ ಸ.ನಂ. 638ಅ ಹಿಸ್ಸಾ 2 ಬ ಜಾಗವನ್ನು ಮಾತ್ರ ಅಳತೆ ಮಾಡಿರುತ್ತೇವೆ ಎಂದರೆ ಸರಿ. ನಿ.ಪಿ. 10 ರಲ್ಲಿ ಆಜುಬಾಜುವಿನಲ್ಲಿ ತೋರಿಸಿರುವ ಸ.ನಂ. ಹೊಸ  ಪೋಟ್ ಹಿಸ್ಸಾ ಆಧಾರದ ಮೇಲೆ ತಯಾರಿಸಿದ ನಕ್ಷೆ ಎಂದರೆ ಸರಿ. ನಿ.ಪಿ. 10 ರಲ್ಲಿ ಕಾಣಿಸಿರುವ ಡೊಟೆಡ್ (.....) ಲೈನ ವೈವಾಟು ಗಡಿಯಾಗಿದ್ದು, ನೇರ ಗೆರೆ ಸರ್ವೇ ಗಡಿ ಗುರುತಿಸುತ್ತದೆ ಎಂದರೆ ಸರಿ. ಮೂಲ ಸರ್ವೇ ಗಡಿ ಹಾಗೂ ವೈವಾಟ ಗಡಿಗೆ ವ್ಯತ್ಯಾಸ ಕಂಡುಬಂದಲ್ಲಿ ಅತೀಕ್ರಮಣ ಎಂದು ಕಾಣಿಸುತ್ತೇವೆ ಎಂದರೆ ಸಾಕ್ಷಿಯು ಮೂಲ ಸರ್ವೇ ಕಲ್ಲುಗಳಿಂದ ಅಳತೆ ಮಾಡಿದಾಗ ಮಾತ್ರ ವ್ಯತ್ಯಾಸ ಕಂಡುಬಂದಲ್ಲಿ ಅತೀಕ್ರಮಣ ಎಂದು ತೋರಿಸುತ್ತೇವೆ ಎಂದು ನುಡಿದಿರುತ್ತಾರೆ. ಅಳತೆ ಮಾಡುವಾಗ ನಮ್ಮ ಭೂಮಾಪನ ಇಲಾಖೆಯ ಸರ್ವೇ ಮ್ಯಾನುಯೆಲ್ ಪ್ರಕಾರ ಅಳತೆ ಮಾಡುತ್ತೇವೆ ಎಂದರೆ ಸರಿ. ಸರ್ವೇ ಮ್ಯಾನುಯೆಲ್ ಪ್ರಕಾರ ಒಂದು ಜಾಗ ಅತೀಕ್ರಮಣ ಆಗಿದೆ ಎಂದು ಕಂಡುಹಿಡಿಯುವಾಗ ಅದರ ಲಗ್ತು ಜಾಗದ ಎಲ್ಲ ಹಿಸ್ಸಾಗಳ ಅಳತೆ ಮಾಡಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿಯು ಸ.ನಂ. 638ಅ ಹಿಸ್ಸಾ 1, 2, 3 ರ ಮೂಲ ಹಿಸ್ಸಾ ನಕಾಶೆಯ ಯಥಾ ನಕಲಿನ ಪ್ರತಿ ಎಂದು ನೋಡಿ ಗುರುತಿಸಿ, ಒಪ್ಪಿಕೊಂಡ ಮೇರೆಗೆ, ಅದನ್ನು ನಿ.ಡಿ. 10 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿಯು 638 ಅ ಹಿಸ್ಸಾ 2, 3, 4 ರಲ್ಲಿ ಹೊಸದಾಗಿ ಆದ ಪೋಟ್ ಹಿಸ್ಸಾ ನಕಾಶೆಯ ಜೆರಾಕ್ಸ ಪ್ರತಿ ಆಗಿರುತ್ತದೆ ಎಂದು ಸಾಕ್ಷಿಯು ನೋಡಿ, ಗುರುತಿಸಿ, ಒಪ್ಪಿಕೊಂಡ ಮೇರೆಗೆ ಅದನ್ನು ನಿ.ಡಿ. 11 ಎಂದು ಗುರುತಿಸಲಾಯಿತು. ದಾವಾ ಸ್ಥಳವನ್ನು ಅಳತೆ ಮಾಡುವಾಗ ನಿ.ಡಿ. 11 ದಾಖಲೆಯ ಆಧಾರದ ಮೇಲೆ ಅಳತೆ ಮಾಡಿರುತ್ತೇವೆ ಎಂದರೆ ಸರಿ. ನಿ.ಡಿ. 10 ಮತ್ತು 11 ರಲ್ಲಿ ವ್ಯತ್ಯಾಸ ಕಂಡುಬರುತ್ತದೆ ಎಂದರೆ ಸಾಕ್ಷಿಯು ನಿ.ಡಿ. 11 ರಲ್ಲಿ ಹಿಸ್ಸಾ 3 ರಲ್ಲಿ ಮಾತ್ರ ವ್ಯತ್ಯಾಸ ಕಂಡುಬರುವುದಾಗಿ ನುಡಿದಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು

ತೋರಿಸಲಾಗಿ, ಸದರಿ ದಾಖಲಾತಿಯು ಸ.ನಂ. 638 ಹಿಸ್ಸಾ 2 ರ ಪಿ ಟಿ ಶೀಟ್ ನ ಯಥಾ ನಕಲು ಆಗಿರುವುದಾಗಿ ನೋಡಿ, ಗುರುತಿಸಿ, ಒಪ್ಪಿಕೊಂಡಿದ್ದು, ಅದನ್ನು ನಿ.ಡಿ. 12 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿಯು ಸ.ನಂ. 638 ಅ ಹಿಸ್ಸಾ 2ಅ ದಲ್ಲಿ ಹಿಸ್ಸಾ 6, 7 ಎಂದು ಹೊಸದಾಗಿ ಆಗಿರುವ ಹಿಸ್ಸಾ ಪೋಟ್ ನಕಾಶೆಯ ಯಥಾ ನಕಲಿನ ಪ್ರತಿ ಎಂದು ನೋಡಿ, ಗುರುತಿಸಿ, ಒಪ್ಪಿಕೊಂಡಿದ್ದು, ಅದನ್ನು ನಿ.ಡಿ. 13 ಎಂದು ಗುರುತಿಸಲಾಯಿತು. ನಿ.ಡಿ. 12 ಮತ್ತು 13 ಕ್ಕೆ ವ್ಯತ್ಯಾಸ ಕಂಡುಬರುತ್ತದೆ ಎಂದರೆ ಸರಿಯಲ್ಲ. ದಿಃ 20-06-2017 ರಂದು 1 ನೇ ಪ್ರತಿವಾದಿಯವರು ಅಳತೆ ಮಾಡಿದ್ದು ಸರಿಯಾಗಿಲ್ಲ ಎಂದು ತಕರಾರು ಸಲ್ಲಿಸಿದ್ದು ಇರುತ್ತದೆ ಎಂದರೆ ಸರಿ. ಸ.ನಂ. 638ಅ ಹಿಸ್ಸಾ 2 ಮತ್ತು ನಂತರದಲ್ಲಿ ಅದ ಪೋಟ್ ಹಿಸ್ಸಾ ನಕ್ಷೆಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ವ್ಯತ್ಯಾಸ ಇರುವ ಪೋಟ್ ಹಿಸ್ಸಾ ನಕ್ಷೆಯ ಆಧಾರದ ಮೇಲೆ ದಿಃ 30-06-2017 ರಂದು ಮತ್ತೊಂದು ಸಲ ಅಳತೆ ಮಾಡಿದ್ದು ಅದಕ್ಕೆ ಪ್ರತಿವಾದಿಯವರು ಲಿಖಿತವಾಗಿ ತಕರಾರು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಹದ್ದುಬಸ್ತ ಮಾಡಲು ಲಗ್ತದಾರರು ತಕರಾರು ಸಲ್ಲಿಸಿದಾಗ ವಿಚಾರಣೆ ಕರೆದು ಪರಿಶೀಲನೆ ಮಾಡುತ್ತಾರೆ ಎಂದರೆ ಸಾಕ್ಷಿಯು ವಿಚಾರಣೆಗೆ ಕರೆಯುವುದಿಲ್ಲ ಬದಲಾಗಿ ಹಿಂಬರಹವನ್ನು ನೀಡುತ್ತೇವೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯವರು ತಕರಾರು ಸಲ್ಲಿಸಿದ ನಂತರ ಅವರಿಗೆ ನಮ್ಮ ಕಚೇರಿಯಿಂದ ಹಿಂಬರಹವನ್ನು ನೀಡಿದ್ದು ಇರುವುದಿಲ್ಲ ಎಂದರೆ ಗೊತ್ತಿಲ್ಲ.

ವಾದಿಯು ಸ.ನಂ. 636 ಹಿಸ್ಸಾ 4 ಬ ಹದ್ದುಬಸ್ತ ಸರ್ವೆಗೆ ಸಲ್ಲಿಸಿರುವ ಅರ್ಜಿಗೆ ನಿ.ಡಿ. 8 ರಂತೆ ವಾದಿಗೆ ನೊಟೀಸನ್ನು ನೀಡಿರುತ್ತೇನೆ ಎಂದರೆ ಸರಿ. ವಾದಿಯವರು ಸಲ್ಲಿಸಿದ ಅರ್ಜಿಗೆ ದಿಃ 20-06-2017 ರಂದು ಸರ್ವೆ ಹದ್ದುಬಸ್ತ ಮಾಡಿರುತ್ತೇವೆ ಎಂದರೆ ಸರಿ. ಜೀತನ ಜನಾರ್ಧನ ಪೈದೆ ಸ.ನಂ 636 ಹಿಸ್ಸಾ 4 ಅ ಜಾಗವನ್ನು ಅಳತೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿ.ಡಿ. 9 ರಂತೆ ರಮೇಶ ಎನ್ ಸರ್ವೆಯರ್ ಸ.ನಂ. 638ಅ ಹಿಸ್ಸಾ 4 ಅ ಜಾಗವನ್ನು ಅಳತೆ ಮಾಡಲು ಬಂದಾಗ ಮೂಲ ನಕಾಶೆಗೂ ಹಾಗೂ ಪೋಟ್ ಹಿಸ್ಸಾ ನಕಾಶೆಗೂ ವ್ಯತ್ಯಾಸ ಇರುವುದರಿಂದ ಅದನ್ನು ಅಳತೆ ಮಾಡದೇ ಸದರಿ

ಅರ್ಜಿಯನ್ನು ವಿಲೇ ಮಾಡಬೇಕೆಂದು ಲಿಖಿತವಾಗಿ ತಿಳಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಮ್ಮ ಭೂಮಾಪನ ಇಲಾಖೆಯ ನಿಯಮಕ್ಕೆ ವಿರುದ್ದವಾಗಿ ವ್ಯತ್ಯಾಸ ಇರುವ ನಕ್ಷೆಯ ಆಧಾರದ ಮೇಲೆ ದಾವಾ ಸ್ಥಳವನ್ನು ಅಳತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯವರ ಆಮಿಷಕ್ಕೆ ಒಳಗಾಗಿ ಸುಳ್ಳು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯ ಸ.ನಂ. 638 ಅ ಹಿಸ್ಸಾ 7 ಎಂದರೆ ಸರಿ. ಸ.ನಂ. 638ಅ ಹಿಸ್ಸಾ 2ಅ 9 ಗುಂಟೆ ಸ್ಥಳದಲ್ಲಿ 1 ಗುಂಟೆ 8 ಆಣೆ ಸ್ಥಳವನ್ನು ಪ್ರತಿವಾದಿಯವರು ಖರೀದಿ ಮಾಡಿದ 1 ಗುಂಟೆ 8 ಆಣೆ ಸ್ಥಳ ಜಾಗ ಹಿಸ್ಸಾ 7 ಆಗಿರುತ್ತದೆ ಎಂದರೆ ಸರಿ. ಸದರಿ ಖರೀದಿ ಮಾಡುವಾಗ 11 ಇ ಸ್ಕೆಚ್ ಮಾಡಿಯೇ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸರ್ವೇ ಗಡಿ ಹಾಗೂ ವೈವಾಟು ಗಡಿಗೆ ವ್ಯತ್ಯಾಸ ಇದ್ದಲ್ಲಿ 11 ಇ ಸ್ಕೆಚ್ ತಯಾರಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. 11 ಇ ಸ್ಕೆಚ್ ನ್ನು ತಯಾರು ಮಾಡುವಾಗ ಲಗ್ತದಾರರ ಅತೀಕ್ರಮಣ ಇದೆ ಎಂದು ಕಂಡುಬಂದಲ್ಲಿ 11 ಇ ಸ್ಕೆಚ್ ತಯಾರಿಸಲು ಬರುವುದಿಲ್ಲ ಎಂದರೆ ಸಾಕ್ಷಿಯು ಮಾರಾಟಗಾರು ಹಾಗೂ ಖರೀದಿದಾರರ ಒಪ್ಪಿಗೆಯ ಮೇರೆಗೆ 11 ಇ ಸ್ಕೆಚ್‌ನ್ನು ಮಾಡುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರ ತಂದೆ ಖರೀದಿ ಮಾಡಿದ ಜಾಗ ಸರ್ವೇ ಇಲಾಖೆಯಲ್ಲಿ ಇರುವ ನಕ್ಷೆಯಂತೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ಸ.ನಂ. 636 ಹಿಸ್ಸಾ 4 ಬ, 638ಅ ಹಿಸ್ಸಾ 3ಬ ಜಾಗದ ಹದ್ದುಬಸ್ತ ಮಾಡಿ ತಯಾರಿಸಿದ ನಕಾಶೆಯ ಯಥಾ ನಕಲಿನ ಪ್ರತಿ ಎಂದು ನೋಡಿ, ಗುರುತಿಸಿ, ಒಪ್ಪಿಕೊಂಡ ಮೇರೆಗೆ ಅದನ್ನು ನಿ.ಡಿ. 14 ಎಂದು ಗುರುತಿಸಲಾಯಿತು. ನಿ.ಡಿ. 14 ನ್ನು ದಿಃ 20-06-2017 ರಂದು ತಯಾರಿಸಿರುತ್ತೇವೆ ಎಂದರೆ ಸರಿ. ನಿ.ಡಿ. 14 ರಲ್ಲಿ ಸ.ನಂ. 638ಅ ಹಿಸ್ಸಾ 3 ಡ ಎಂದು ಕಾಣಿಸಿರುತ್ತಾರೆ ಎಂದರೆ ಸರಿ. ದಾವಾ ಸ್ಥಳವನ್ನು ಅಳತೆ ಮಾಡುವಾಗ ನಿ.ಡಿ. 10 ರಲ್ಲಿ 638ಅ ಹಿಸ್ಸಾ 3 ಡ ಎಂದು ಕಾಣಿಸುವುದಿಲ್ಲ ಎಂದರೆ ಸರಿ. ನಿ.ಡಿ. 14 ನ್ನು ತಯಾರಿಸುವಾಗ ನಿ.ಡಿ. 14 ರಲ್ಲಿ ತೋರಿಸಿರುವ ಎಲ್ಲ ಹಿಸ್ಸಾಗಳ ಸರ್ವೇ ಕಲ್ಲುಗಳನ್ನು ಆಧಾರವಾಗಿಟ್ಟುಕೊಂಡು ಅಳತೆ ಮಾಡಿರುತ್ತೇವೆ ಎಂದರೆ ಸರಿ. ನಿ.ಡಿ. 14 ರಂತೆ 638 ಅ ಹಿಸ್ಸಾ 2ಅ ದಲ್ಲಿ ವೈವಾಟು ಗಡಿಗೂ ಸರ್ವೇ ಗಡಿಗೂ ವ್ಯತ್ಯಾಸ ಇರುವುದು ಕಾಣಿಸಿದ್ದು

ಇರುವುದಿಲ್ಲ ಎಂದರೆ ಸರಿ. ನಿ.ಡಿ. 14 ರಲ್ಲಿ ವೈವಾಟಿ ಗಡಿಗೂ ಹಾಗೂ ಸರ್ವೇ ಗಡಿಗೂ ವ್ಯತ್ಯಾಸ ಇರುವುದು ಕಾಣಿಸಿರುವುದಿಲ್ಲ ಆದರೆ ನಿ.ಡಿ. 10 ರಲ್ಲಿ ಕಾಣಿಸಿರುತ್ತೇವೆ ಎಂದರೆ ಸಾಕ್ಷಿಯು ಸಂಬಂಧಪಟ್ಟ ಹಿಸ್ಸೆಗಳಿಗೆ ಮಾತ್ರ ಗಡಿಗಳನ್ನು ಗುರುತಿಸಿರುವುದಾಗಿ ನುಡಿದಿರುತ್ತಾರೆ. ವಾದಿಯವರಿಗೆ ಬೇಕಾದ ರೀತಿಯಲ್ಲಿ ನಕಾಶೆಯನ್ನು ತಯಾರಿಸಿ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸುಳ್ಳು ವರದಿಯನ್ನು ಆಧಾರವಾಗಿಟ್ಟುಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರವಾದಿಯವರು ವಾದಿಯವರ ಸ್ಥಳವನ್ನು ಅತೀಕ್ರಮಣ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರಧಾನ ಸಿವಿಲ್ ಜಡ್ಜ, ಕುಮಟಾ